# ವಿದ್ಯುತ್ ಪ್ರವಹಿಸಿ ಇಬ್ಬರ ದುರ್ಮರಣ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮುನೇಕೊಳಾಲು ಬಳಿಯ ಸಪ್ತಗಿರಿ ಲೇಔಟ್‌ನಲ್ಲಿ ವಿದ್ಯುತ್ ಪ್ರವಹಿಸಿ ವೀರಪ್ಪ (75) ಹಾಗೂ ಮೋಹನ್ ಸಾಮಂತ್ (55) ಎಂಬುವರು ಮೃತಪಟ್ಟಿದ್ದಾರೆ.

ಘಟನೆಯಲ್ಲಿ ಕಾರ್ಮಿಕ ಬಬ್ಬನ್ (35) ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದೆ ಎಂದು ಮಾರತ್ತಹಳ್ಳಿ ಪೊಲೀಸರು ತಿಳಿಸಿದರು.

ಸ್ಥಳೀಯ ನಿವಾಸಿ ವೀರಪ್ಪ ಮನೆಯ ಶೌಚಾಲಯಕ್ಕೆ ಬರುತ್ತಿದ್ದ ನೀರು ಸ್ಥಗಿತವಾಗಿತ್ತು. ಅದನ್ನು ಸರಿಪಡಿಸುವಂತೆ, ಕೊಳಾಯಿ ದುರಸ್ತಿ ಮಾಡುತ್ತಿದ್ದ ಮೋಹನ್‌ಗೆ ಹೇಳಿದ್ದರು. ಮನೆಯ ಚಾವಣಿಯಿಂದ ಐದು ಅಡಿ ಎತ್ತರದಲ್ಲೇ ಹೈಟೆನ್ಶನ್ ವಿದ್ಯುತ್ ತಂತಿ ಹಾದುಹೋಗಿದೆ. ಮೋಹನ್ ಅದೇ ಚಾವಣಿಯಲ್ಲಿ ನಿಂತು ಕಾರ್ಮಿಕರ ಜತೆ ಕೆಲಸ ಮಾಡುತ್ತಿದ್ದ ವೇಳೆ ಈ ದುರ್ಘಟನೆ ಸಂಭವಿಸಿದೆ ಎಂದರು.

'ಶೌಚಾಲಯಕ್ಕೆ ನೀರು ಪೂರೈಸುವ ಪೈಪ್‌ನಲ್ಲಿ ಗಲೀಜು ತುಂಬಿಕೊಂಡಿತ್ತು. ಅದನ್ನು ತೆಗೆಯಲು ಕಾರ್ಮಿಕರು, 15 ಅಡಿ ಉದ್ದ ರಾಡ್ ಬಳಸಿದ್ದರು. ಆ ರಾಡನ್ನು ಪೈಪ್‌ನಲ್ಲಿ ಹಾಕಿ ಮೇಲೆತ್ತುವ ವೇಳೆ ವಿದ್ಯುತ್ ತಂತಿಗೆ ತಗುಲಿತ್ತು. ವಿದ್ಯುತ್ ಪ್ರವಹಿಸಿದ್ದರಿಂದ ರಾಡ್ ಹಿಡಿದುಕೊಂಡಿದ್ದ ವೀರಪ್ಪ ಹಾಗೂ ಮೋಹನ್ ಸ್ಥಳದಲ್ಲೇ ಮೃತಪಟ್ಟರು' ಎಂದು ತಿಳಿಸಿದರು.

# ವಿದ್ಯುತ್ ತಂತಿ ಸ್ಪರ್ಶ: ಇಬ್ಬರ ಸಾವು

**ಬೆಂಗಳೂರು:** ಮನೆಯ ಶೌಚಾಲಯ ದುರಸ್ತಿಗೊಳಿಸುತ್ತಿದ್ದಾಗ ಹೈಟೆನ್ಷನ್ ವಿದ್ಯುತ್ ತಂತಿ ತಗುಲಿ ಇಬ್ಬರು ಮೃತಪಟ್ಟಿರುವ ಘಟನೆ ಮಾರತ್ತಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ಮುನ್ನೆಕೊಳಲು ಬಳಿ ನಡೆದಿದೆ. ವೀರಪ್ಪ (75), ಮೋಹನ್ ಮಹಂತಾ (50) ಮೃತಪಟ್ಟ ದುರ್ದೈವಿಗಳು. ವೀರಪ್ಪ ಮನೆ ಮಾಲೀಕನಾಗಿದ್ದು, ಕೊಲ್ಕತ್ತಾ ಮೂಲದ ಕಾರ್ಮಿಕ ಮೋಹನ್ ಜೀವನ ನಡೆಸುವ ಸಲುವಾಗಿ ನಗರಕ್ಕೆ ಬಂದಿದ್ದು, ಮನೆಯ ಶೌಚಾಲಯ ದುರಸ್ತಿಗೊಳಿಸುತ್ತಿದ್ದರು. ಉದ್ದದ ಕಬ್ಬಿಣದ ರಾಡ್ ನಿಂದ ಶೌಚಾಲಯ ದುರಸ್ತಿಗೊಳಿಸುತ್ತಿದ್ದಾಗ ವೇಳೆ ಕಬ್ಬಿಣದ ಗ್ರೀಲ್ ವಿದ್ಯುತ್ ತಂತಿಗೆ ತಗುಲಿದ ಪರಿಣಾಮ ವಿದ್ಯುತ್ ಹರಿದು ಇಬ್ಬರು ಮೃತಪಟ್ಟಿದ್ದಾರೆ.

# ಶೌಚಗುಂಡಿ ದುರಸ್ತಿ ವೇಳೆ ವಿದ್ಯುತ್ ಸ್ಪರ್ಶಿಸಿ ಇಬ್ಬರ ಸಾವು

■ **ವಿಕ ಸುದ್ದಿಲೋಕ** ಬೆಂಗಳೂರು

ಕಟ್ಟಿಕೊಂಡಿದ್ದ ಶೌಚಗುಂಡಿ ದುರಸ್ತಿ ವೇಳೆ ವಿದ್ಯುತ್ ಸ್ಪರ್ಶಿಸಿ ಕಟ್ಟಡದ ಮಾಲೀಕ ಮತ್ತು ಕೆಲಸಗಾರ ಮೃತಪಟ್ಟಿದ್ದು ಒಬ್ಬರ ಗಂಭೀರವಾಗಿ ಗಾಯಗೊಂಡಿರುವ ಘಟನೆ ಮಾರತ್‌ಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ಸಪ್ತಗಿರಿ ಲೇಔಟ್‌ನಲ್ಲಿ ನಡೆದಿದೆ.



ವೀರಪ್ಪ

**ಇನ್ನೊಬ್ಬರ ಸ್ಥಿತಿ ಗಂಭೀರ**

ಕಟ್ಟಡದ ಮಾಲೀಕ ವೀರಪ್ಪ (75) ಮತ್ತು ಪಶ್ಚಿಮ ಬಂಗಾಳ ಮೂಲದ ಕೂಲಿ ಕಾರ್ಮಿಕ ಮೋಹನ್ ಸಮಂತ (34) ಮೃತಪಟ್ಟವರು. ಪಶ್ಚಿಮ ಬಂಗಾಳ ಮೂಲದವರೇ ಆದ ಬಬನ್ ಎಂಬುವರು ಗಾಯಗೊಂಡಿದ್ದು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಸಪ್ತಗಿರಿ ಲೇಔಟ್‌ನಲ್ಲಿ ವೀರಪ್ಪ ಅವರ ನಾಲ್ಕು ಅಂತಸ್ತಿನ ಕಟ್ಟಡ ಇದೆ. ಅಲ್ಲಿನ ಶೌಚಗುಂಡಿ ಕಟ್ಟಿಕೊಂಡಿದ್ದರಿಂದ ರಿಪೇರಿಗಾಗಿ ವೀರಪ್ಪ ಅವರೇ ಪಕ್ಕದ ಕಟ್ಟಡದಲ್ಲಿ ಕೆಲಸ ಮಾಡುತ್ತಿದ್ದ ಕೂಲಿ ಕಾರ್ಮಿಕರಾದ ಮೋಹನ್ ಮತ್ತು ಬಬನ್‌ರನ್ನು ಕರೆತಂದಿದ್ದರು. 12ರಿಂದ 15 ಅಡಿ ಉದ್ದದ ಕಬ್ಬಿಣದ ರಾಡನ್ನು ಕಟ್ಟಿಕೊಂಡಿದ್ದ ಶೌಚ ಗುಂಡಿಯ ಪೈಪ್‌ಲೈನ್ ಒಳಗೆ ಹಾಕಿ ದುರಸ್ತಿ ಕಾರ್ಯದಲ್ಲಿ ನಿರತರಾಗಿದ್ದರು. ಈ ವೇಳೆ ಕಬ್ಬಿಣದ ರಾಡ್ ಆಕಸ್ಮಿಕವಾಗಿ ನೆಲದೊಳಗೆ ಹಾದುಹೋಗಿದ್ದ ವಿದ್ಯುತ್‌ಲೈನ್‌ಗೆ ತಾಗಿದೆ. ರಾಡ್ ಹಿಡಿದುಕೊಂಡಿದ್ದ ಮೂವರಲ್ಲಿ ಇಬ್ಬರು ಸ್ಥಳದಲ್ಲೇ ಮೃತಪಟ್ಟರೆ ಬಬನ್‌ಗೆ ಗಾಯಗಳಾಗಿವೆ. ಕಟ್ಟಡದ ನಿವಾಸಿಗಳು ಬಬನ್ ಅವರನ್ನು ಸಮೀಪದ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಪೊಲೀಸರಿಗೆ ಮಾಹಿತಿ ನೀಡಿದ್ದರು. ಮಾರತ್‌ಹಳ್ಳಿ ಠಾಣೆ ಪೊಲೀಸರು ಪ್ರಕರಣದ ದಾಖಲಿಸಕೊಂಡು ತನಿಖೆ ಮುಂದುರಿಸಿದ್ದಾರೆ.

# ಇಡೀ ರಾಜ್ಯಕ್ಕೆ ಎಲ್ಇಡಿ: ನಿರ್ಧಾರ

## ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ಅಂಜುಂ ಪರ್ವೇಜ್ ಹೇಳಿಕೆ

ಪ್ರಜಾವಾಣಿ ವಾರ್ತೆ




ಮಳೆ ನೀರು ಸಂಗ್ರಹ ತಂತ್ರಜ್ಞಾನದ ಬಗ್ಗೆ ಫಾರ್ಮ್ ಲ್ಯಾಂಡ್ ಕಂಪನಿ ಸಹ ಸಂಸ್ಥಾಪಕ ವಿಜಯ್ ರಾಜ್ ಮಾಹಿತಿ ನೀಡಿದರು. ಅಂಜುಮ್ ಪರ್ವೇಜ್, ಡಾ.ಅಜಯ್ ಮಾಥೂರ್, ಸಂಜಯ್ ಸೇಥಿ ಇದ್ದರು –ಪ್ರಜಾವಾಣಿ ಚಿತ್ರ

ಬೆಂಗಳೂರು: ಇಡೀ ರಾಜ್ಯದಲ್ಲಿ ಹಂತ ಹಂತವಾಗಿ ಎಲ್ಲ ವಿದ್ಯುತ್ ದೀಪಗಳನ್ನು ಖಾಸಗಿ ಮತ್ತು ಸಾರ್ವಜನಿಕ ಸಹಭಾಗಿತ್ವದಲ್ಲಿ ಎಲ್ಇಡಿ ಬಲ್ಬ್‌ಗಳಿಗೆ ಬದಲಿಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ ಎಂದು ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಅಂಜುಂ ಪರ್ವೇಜ್ ತಿಳಿಸಿದರು.

ಇಂಧನ ಮತ್ತು ಸಂಪನ್ಮೂಲ ಸಂಸ್ಥೆ (ಟೆರಿ) ಮತ್ತು 'ಗ್ಲೋಬಲ್ ಸೌತ್' ನಗರದಲ್ಲಿ ಗುರುವಾರ ಆಯೋಜಿಸಿದ್ದ ಸುಸ್ಥಿರ ಕಟ್ಟಡಗಳ ನಿರ್ಮಾಣ ಸಂಶೋಧನೆ ಮತ್ತು ಅಭಿವೃದ್ಧಿ ಕುರಿತ ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು.

'ಕಟ್ಟಡಗಳ ತ್ಯಾಜ್ಯ ವಿಲೇವಾರಿಯ ದೊಡ್ಡ ಸವಾಲು ನಮ್ಮೆದುರಿಗೆ ಇದೆ. ಪ್ರತಿಷ್ಠಿತ ಬಡಾವಣೆ ಡಾಲರ್ಸ್ ಕಾಲೊನಿಯಲ್ಲಿ ಜನರು ರಾತ್ರಿಯಾಗುತ್ತಿದ್ದಂತೆ ಐಷಾರಾಮಿ ಕಾರುಗಳಲ್ಲಿ ಕಸ ತಂದು ರಸ್ತೆ ಬದಿ ಹಾಕುವುದನ್ನು ಕಾಣುತ್ತಿದ್ದೇವೆ. ತ್ಯಾಜ್ಯದಿಂದ ಇಂಧನ ತಯಾರಿಸಲು ನಾವು ಯೋಜನೆ ರೂಪಿಸಿದ್ದೇವೆ. ಮನೆಗಳ ಚಾವಣಿಯಲ್ಲಿ ಸೌರ ವಿದ್ಯುತ್ ಉತ್ಪಾದನೆಗೂ ಒತ್ತು ನೀಡಿದ್ದೇವೆ' ಎಂದರು.

'ಕಾವೇರಿ ನೀರಿಗಾಗಿ ಕರ್ನಾಟಕ ಮತ್ತು ತಮಿಳುನಾಡು ದೀರ್ಘ ಕಾಲದಿಂದ ನ್ಯಾಯಾಲಯದಲ್ಲಿ ಹೋರಾಟ ನಡೆಸುತ್ತಿವೆ. ಭವಿಷ್ಯದಲ್ಲಿ ಇಂತಹ ಸೆಣಸಾಟ ಜಿಲ್ಲೆ, ಜಿಲ್ಲೆಗಳ ನಡುವೆ, ನಗರ ಮತ್ತು ಗ್ರಾಮಾಂತರ ಪ್ರದೇಶಗಳ ನಡುವೆ ಕಾಣಿಸಿದರೂ ಅಚ್ಚರಿಪಡಬೇಕಿಲ್ಲ. ಕೈಗಾರಿಕೆಗಳು ತ್ಯಾಜ್ಯ ನೀರನ್ನು ಸಂಸ್ಕರಿಸಿ ಪುನರ್ ಬಳಕೆ ಮಾಡುವುದನ್ನು ಕಡ್ಡಾಯಗೊಳಿಸಬೇಕಿದೆ. ನಗರದ ಹಲವು ಕಟ್ಟಡಗಳಲ್ಲಿ ಎಸ್‌ಟಿಪಿಗಳು ನೆಪಮಾತ್ರಕ್ಕೆ ಇವೆ. ಅವು ಕಾರ್ಯನಿರ್ವಹಿಸುತ್ತಿವೆಯೇ ಅಥವಾ ಇಲ್ಲವೇ ಎನ್ನುವುದರ ಮೇಲೆ ಮಾಲಿನ್ಯ ನಿಯಂತ್ರಣ ಮಂಡಳಿ ಗಮನ ಇಡಬೇಕಿದೆ' ಎಂದರು.

ಟೆರಿ ಮಹಾನಿರ್ದೇಶಕ ಡಾ.ಅಜಯ್ ಮಾಥುರ್ ಮಾತನಾಡಿ 'ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯ ಕಡೆಗೆ ದಾಪುಗಾಲು ಇಡುವಾಗ ಪರಿಸರ ಸುಸ್ಥಿರತೆ ನಿರ್ಲಕ್ಷಿಸುವಂತಿಲ್ಲ. ವೇಗದ ನಗರೀಕರಣ, ಶಕ್ತಿ ಸಂಪನ್ಮೂಲದ ಕೊರತೆ ಹಾಗೂ ಪರಿಸರ ಮಾಲಿನ್ಯ ಹೆಚ್ಚುತ್ತಿರುವಾಗ ಇಂಧನ ದಕ್ಷತೆ ಮತ್ತು ಪರಿಸರ ಸ್ನೇಹಿ ಕಟ್ಟಡಗಳ ನಿರ್ಮಾಣ ತಂತ್ರಜ್ಞಾನ ಅಳವಡಿಸಿಕೊಳ್ಳುವುದು ಅನಿವಾರ್ಯ' ಎಂದರು.

ಡ್ಯಾನ್‌ಫೋಸ್ ಸಿಇಒ ಪಿ.ರವಿ ಚಂದ್ರನ್ ಮಾತನಾಡಿ, 'ಈಗ ಎಲ್ಲ ಕಡೆಗಳಲ್ಲೂ ಒಂದೇ ರೀತಿ ಮತ್ತು ಒಂದೇ ಬಗೆಯ ಸಾಮಗ್ರಿ ಬಳಸಿ ಕಟ್ಟಡ ನಿರ್ಮಿಸಲಾಗುತ್ತಿದೆ. ಆಯಾ ಪ್ರದೇಶದ ಹವಾಮಾನ ಮತ್ತು ಸ್ಥಳೀಯ ಸಾಮಗ್ರಿಗಳ ಲಭ್ಯತೆಗೆ ತಕ್ಕಂತೆ ಕಟ್ಟಡಗಳನ್ನು ನಿರ್ಮಿಸಿದರೆ ಸುಸ್ಥಿರವಾಗಿಯೂ ಇರುತ್ತವೆ. ದೀರ್ಘ ಬಾಳಿಕೆಯೂ ಬರುತ್ತವೆ' ಎಂದರು.

ಸಮ್ಮೇಳನದ ಪ್ರದರ್ಶನ ಮಳಿಗೆಗಳಲ್ಲಿ ಕಟ್ಟಡ ನಿರ್ಮಾಣ ಸಂಸ್ಥೆಗಳು, ನಿರ್ಮಾಣ ಕ್ಷೇತ್ರದ ಹೊಸ ಆವಿಷ್ಕಾರ, ಪ್ರೀ- ಕಾಸ್ಟ್ ತಂತ್ರಜ್ಞಾನ ಮತ್ತು ರೇಡಿಯಂಟ್ ಕೂಲಿಂಗ್ ತಂತ್ರಜ್ಞಾನ ಪ್ರದರ್ಶಿಸಿದವು. ಚಿಕ್ಕಮಗಳೂರು ಮೂಲದ ಫಾರ್ಮ್ ಲ್ಯಾಂಡ್ ಕಂಪನಿಯ ಮಳೆ ನೀರು ಸಂಗ್ರಹ ತಂತ್ರಜ್ಞಾನದ ಮಾದರಿ ಗಮನ ಸೆಳೆಯಿತು.

---

09-04, 09-03-18

# ಬೆಂಕಿ ನಂದಿಸಲು ಹೋದ ರೈತ ಸಾವು

ರಾಗಿ ಬಣವೆಗೆ ಬಿದ್ದ ಬೆಂಕಿ ನಂದಿಸಲು ಹೋದ ವ್ಯಕ್ತಿ, ಬೆಂಕಿಯ ಕೆನ್ನಾಲಿಗೆ ಸಿಲುಕಿ ಸಾವನ್ನಪ್ಪಿರುವ ದಾರುಣ ಘಟನೆ ನಗರದ ಹೊರವಲಯದ ಕೋಡಿಯಾಲ ಗ್ರಾಮದಲ್ಲಿ ನಡೆದಿದೆ.

ಕೋಡಿಯಾಲ ಗ್ರಾಮದ ಕೆಂಪಯ್ಯ ಮೃತ ದುರ್ದೈವಿ. ಲಕ್ಷ್ಮೀ ನಾರಾಯಣ ಎಂಬುವವರು ಒಂದುವರೆ ಎಕರೆಯಲ್ಲಿ ರಾಗಿ ಬೆಳೆದಿದ್ದರು. ರಾಗಿಯನ್ನು ಒಕ್ಕಣೆ ವ'ಎಾ ಡ' ಲು ಮುಂದಾಗಿದ್ದ ಲಕ್ಷ್ಮೀನಾರಾಯಣ ರಾಗಿ ಮೇವನ್ನು ಮೆದೆ ಹಾಕಿದ್ದರು. ಬುಧವಾರ ಮಧ್ಯಾಹ್ನ ವೇಳೆ ಲಕ್ಷ್ಮೀನಾರಾಯಣ ಅವರ ಮೆದೆಗೆ ಬಿದ್ದಿತ್ತು. ಈ ವೇಳೆ ಜಮೀನಿನ ಕಡೆ ಹೋಗಿದ್ದ ಕೆಂಪಯ್ಯ ಬೆಂಕಿ ಕಂಡು ನಂದಿಸಲು ಮುಂದಾಗಿದ್ದಾರೆ. ಬೆಂಕಿಯ ಕೆನ್ನಾಲಿಗೆ ಹಾಗೂ ಹೊಗೆಯ ನಡುವೆ ಸಿಲುಕಿ ಹೊರಬರಲಾಗದೇ ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾರೆ. ಘಟನೆಯಲ್ಲಿ ಎರಡು ರಾಗಿ ಮೆದೆಗಳು ಭಸ್ಮವಾಗಿವೆ. ಈ ಬಗ್ಗೆ ಬಿಡದಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು ತನಿಖೆ ಕೈಗೊಂಡಿದ್ದಾರೆ.

ಅಪರಾಧ ಸುದ್ದಿಗಳು

**ಶಾರ್ಟ್ ಸರ್ಕ್ಯೂಟ್‌ನಿಂದ ಇಬ್ಬರ ಸಾವು**

ಶೌಚಾಲಯವನ್ನು ಕಬ್ಬಿಣದ ರಾಡ್‌ನಿಂದ ಶುಚಿಗೊಳಿಸುತ್ತಿದ್ದ ವೇಳೆ ಶಾರ್ಟ್ ಸರ್ಕ್ಯೂಟ್‌ನಿಂದ ಸ್ಥಳದಲ್ಲಿಯೇ ಇಬ್ಬರು ಸಾವನ್ನಪ್ಪಿರುವ ದಾರುಣ ಘಟನೆ ಮಾರತ್ತಹಳ್ಳಿಯ ಮುನ್ನೆಕೊಳಲು ಪ್ರದೇಶದಲ್ಲಿ ನಡೆದಿದೆ.

ಮನೆಯ ಮಾಲೀಕ ವೀರಪ್ಪ (75), ಕೋಲ್ಕತ್ತಾ ಮೂಲದ ಕಾರ್ಮಿಕ ಮೋಹನ್ ಮಹಂತಾ (50) ಮೃತ ದುರ್ದೈವಿಗಳು. ಈ ಇಬ್ಬರು ನಿನ್ನೆ ಸಂಜೆ 4 ಗಂಟೆ ಸುಮಾರು ಮನೆಯ ಶೌಚಾಲಯವನ್ನು ಕಬ್ಬಿಣದ ರಾಡ್‌ನಿಂದ ಕ್ಲೀನ್ ಮಾಡುತ್ತಿದ್ದರು. ಈ ವೇಳೆ ಕಬ್ಬಿಣದ ರಾಡ್ ವಿದ್ಯುತ್ ತಂತಿಗೆ ತಗುಲಿದ್ದು ಶಾರ್ಟ್ ಸರ್ಕ್ಯೂಟ್ ಉಂಟಾಗಿದ್ದು ಸ್ಥಳದಲ್ಲಿಯೇ ಇಬ್ಬರು ಸಾವನ್ನಪ್ಪಿದ್ದಾರೆ.

ಈ ಬಗ್ಗೆ ಪ್ರಕರಣ ಮಾರತ್ತಹಳ್ಳಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ. ಸ್ಥಳಕ್ಕೆ ಭೇಟಿ ನೀಡಿರುವ ಪೊಲೀಸರು ಸ್ಥಳ ಪರಿಶೀಲನೆ ನಡೆಸಿದ್ದು ಹೆಚ್ಚಿನ ತನಿಖೆ ನಡೆಸುತ್ತಿದ್ದಾರೆ.

---

Vijayavani 09/03/18

# ವಿದ್ಯುತ್ ಪ್ರವಹಿಸಿ ಇಬ್ಬರ ದುರ್ಮರಣ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ನಗರದ ಹೊರವಲಯ ಮುನ್ನೆಕೋಳಾಲದ ಕಟ್ಟಡದಲ್ಲಿ ಗುರುವಾರ ಕೊಳಾಯಿ ಕೆಲಸ ಮಾಡುತ್ತಿದ್ದಾಗ ವಿದ್ಯುತ್ ಪ್ರವಹಿಸಿ ಮನೆ ಮಾಲೀಕ ಹಾಗೂ ಕಟ್ಟಡದ ಮೇಸ್ತ್ರಿ ಮೃತಪಟ್ಟಿದ್ದಾರೆ.

» **ಹೈವೋಲ್ಟೇಜ್ ತಂತಿಗೆ ಕಬ್ಬಿಣದ ಪೈಪ್ ತಗುಲಿ ಅವಘಡ**

ಮಾಲೀಕ ವೀರಪ್ಪ (75) ಹಾಗೂ ಮೇಸ್ತ್ರಿ ಮೋಹನ್ ಸಾವಂತ (55) ಮೃತ ಪಟ್ಟವರು. ಬಬ್ಬನ್ (35) ಎಂಬಾತ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ವಿದ್ಯುತ್ ಪ್ರವಹಿಸಿದ ಪರಿಣಾಮ ಇಬ್ಬರೂ ಸಂಪೂರ್ಣ ಸುಟ್ಟು ಕರಕಲಾಗಿದ್ದಾರೆ ಎಂದು ಮಾರತ್‌ಹಳ್ಳಿ ಪೊಲೀಸರು ತಿಳಿಸಿದ್ದಾರೆ.

**ಕಟ್ಟಡದ ಮೇಲೆ ವಿದ್ಯುತ್ ತಂತಿ**

**ವೀರಪ್ಪ ಅವರ ಮನೆ ಮೇಲೆ 11 ಕಿಲೋ ವಾಟ್ ಸಾಮರ್ಥ್ಯದ ವಿದ್ಯುತ್ ತಂತಿ ಸಮೀಪದಲ್ಲಿರುವ ಕೆಪಿಟಿಸಿಎಲ್ ವಿದ್ಯುತ್ ವಿತರಣಾ ಕೇಂದ್ರಕ್ಕೆ ಹಾದು ಹೋಗಿದೆ.**

ಮನ್ನೆಕೋಳಾಲದಲ್ಲಿ ವೀರಪ್ಪ ಅವರಿಗೆ ಸೇರಿದ ಒಂದು ಅಂತಸ್ತಿನ ಮನೆ ಇದೆ. ಮನೆಯ ಶೌಚಗೃಹದ ಕಬ್ಬಿಣದ ಕೊಳಾಯಿ ಇತ್ತೀಚೆಗೆ ಹಾಸಿಯಾಗಿತ್ತು. ಗುರುವಾರ ಬೆಳಗ್ಗೆ ಬಿಹಾರ ಮೂಲದ ನಾಲ್ಕೈದು ಮಂದಿ ದುರಸ್ತಿ ಕೆಲಸ ಮಾಡುತ್ತಿದ್ದರು. ವೀರಪ್ಪ ಹಾಗೂ ಮೋಹನ್ ಸಾವಂತ ಕೂಡ ಸ್ಥಳದಲ್ಲಿದ್ದರು. ಹಾನಿಯಾಗಿರುವ 20 ಅಡಿ ಉದ್ದದ ಪೈಪ್ ತೆಗೆದು ಹೊಸ ಪೈಪ್ ಜೋಡಿಸಬೇಕು ಎಂದು ಕಾರ್ಮಿಕರು ಹೇಳಿದ್ದರು. ಹಾಳಾಗಿದ್ದ ಕೊಳಾಯಿ ಹೊರಗೆಳೆಯುವಂತೆ ವೀರಪ್ಪ ಸೂಚಿಸಿದಾಗ ಕಾರ್ಮಿಕರು ಹಳೇ ಪೈಪನ್ನು ಹೊರಕ್ಕೆಳೆದಿದ್ದರು. ಅದನ್ನು ಬೇರೆಡೆಗೆ ಸಾಗಿಸಲು ವೀರಪ್ಪ ಹಾಗೂ ಮೋಹನ್ ಮೇಲಕ್ಕೆ ಎತ್ತಿದಾಗ ಸಮೀಪದಲ್ಲೇ ಹಾದುಹೋಗಿದ್ದ 11 ಕಿಲೋವಾಟ್ ಸಾಮರ್ಥ್ಯದ ವಿದ್ಯುತ್ ತಂತಿಗೆ ತಗುಲಿ ವಿದ್ಯುತ್ ಪ್ರವಹಿಸಿದೆ ಎಂದು ಮಾರತ್‌ಹಳ್ಳಿ ಪೊಲೀಸರು ಮಾಹಿತಿ ನೀಡಿದ್ದಾರೆ.

# ಬಿಎಂಟಿಸಿಗೆ ಶೀಘ್ರ ಎಲೆಕ್ಟ್ರಿಕ್ ಬಸ್

## ಹೈದರಾಬಾದ್ ಕಂಪನಿಗೆ ಟೆಂಡರ್ » ಮೊದಲ ಹಂತದಲ್ಲಿ ಬರಲಿವೆ 40 ಗೋಲ್ಡ್‌ಸ್ಟೋನ್

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ರಾಜಧಾನಿಯ ರಸ್ತೆಯಲ್ಲಿ 6 ತಿಂಗಳೊಳಗಾಗಿ ಎಲೆಕ್ಟ್ರಿಕ್ ಬಸ್ ಓಡಾಟ ಪ್ರಾರಂಭವಾಗಲಿದೆ. ಗುತ್ತಿಗೆ ಆಧಾರದಲ್ಲಿ 150 ಎಲೆಕ್ಟ್ರಿಕ್ ಬಸ್ ಪಡೆಯಲು ಬಿಎಂಟಿಸಿ ಆಹ್ವಾನಿಸಿದ್ದ ಟೆಂಡರ್‌ನಲ್ಲಿ ಹೈದರಾಬಾದ್ ಮೂಲದ ಗೋಲ್ಡ್‌ಸ್ಟೋನ್ ಕಂಪನಿ ಕನಿಷ್ಠ ಬಿಡ್ ಸಲ್ಲಿಸಿದೆ. ಮೊದಲ ಹಂತದಲ್ಲಿ 40 ಬಸ್ ಪಡೆಯಲು ಬಿಎಂಟಿಸಿ ನಿರ್ಧರಿಸಿದೆ.

ಕೇಂದ್ರದ ಫಾಸ್ಟರ್ ಅಡಾಪ್ಷನ್ ಆ್ಯಂಡ್ ಮ್ಯಾನ್ಯುಫ್ಯಾಕ್ಚರಿಂಗ್ ಆಫ್ ಎಲೆಕ್ಟ್ರಿಕ್ ವೆಹಿಕಲ್ಸ್ (ಫೇಮ್) ಅನುದಾನ ಬಳಸಿಕೊಂಡು ಬಿಎಂಟಿಸಿ ಎಲೆಕ್ಟ್ರಿಕ್ ಬಸ್ ಪಡೆಯುವ ಯೋಜನೆ ಕೈಗೆತ್ತಿಕೊಂಡಿದೆ. ಕಳೆದ ಡಿಸೆಂಬರ್ ಅಂತ್ಯಕ್ಕೆ ನಿಗಮ ಕರೆದಿದ್ದ ಟೆಂಡರ್‌ನಲ್ಲಿ ಅಶೋಕ್ ಲೈಲಾಂಡ್, ಟಾಟಾ, ಮಹೀಂದ್ರ, ಗೋಲ್ಡ್ ಸ್ಟೋನ್, ಮಿತ್ರ ಎನ್4, ರಿಬೆಟ್ ಪ್ರೊಜೆಕ್ಟ್ ಪ್ರೈವೇಟ್ ಲಿ., ಎಸ್ಸೆಲ್ ಇನ್‌ಫ್ರಾಸ್ಟ್ರಕ್ಚರ್ ಸೇರಿ 7 ಕಂಪನಿಗಳು ಭಾಗವಹಿಸಿದ್ದವು. ಇದರಲ್ಲಿ ಮಹೀಂದ್ರ ಸಲ್ಲಿಸಿದ್ದ ಟೆಂಡರ್ ಅನರ್ಹವಾಗಿತ್ತು. ಉಳಿದ 6 ಕಂಪನಿಗಳು ಟೆಂಡರ್‌ನಲ್ಲಿ ಸಲ್ಲಿಸಿದ್ದ ಫೈನಾನ್ಸಿಯಲ್ ಬಿಡ್‌ನಲ್ಲಿ (ಹಣಕಾಸು) ಗೋಲ್ಡ್‌ಸ್ಟೋನ್ ಅತಿ ಕಡಿಮೆ ದರವನ್ನು ಬಿಡ್ ಮಾಡಿ, ಗುತ್ತಿಗೆ ತನ್ನದಾಗಿಸಿಕೊಂಡಿದೆ.

» ಕಂಪನಿಯಿಂದಲೇ ಚಾರ್ಜಿಂಗ್ ಘಟಕ ನಿರ್ಮಾಣ

» ಬಸ್‌ನ ವಿದ್ಯುತ್ ಬಳಕೆ ವೆಚ್ಚ ಭರಿಸಲಿರುವ ಬಿಎಂಟಿಸಿ

» ನಿರ್ವಹಣೆಗೆ ಕಂಪನಿಯಿಂದಲೇ ಇಬ್ಬರು ವ್ಯವಸ್ಥಾಪಕರ ನೇಮಕ

**ಪ್ರತಿ ಕಿ.ಮೀ.ಗೆ 37.5 ರೂ:** ಗುತ್ತಿಗೆ ಪಡೆದುಕೊಂಡ ಕಂಪನಿಯೇ ಎಲೆಕ್ಟ್ರಿಕ್ ಬಸ್‌ಗಳ ನೋಂದಣಿ, ವಿಮೆ, ಮೋಟಾರು ವಾಹನ ತೆರಿಗೆ, ಸೇವಾ ತೆರಿಗೆ ಕಟ್ಟಬೇಕು. ಪ್ರಯಾಣಿಕರ ತೆರಿಗೆ ಮತ್ತು ಸ್ಟೇಜ್ ಕ್ಯಾರಿಯೇಜ್ ಪರ್ಮಿಟ್ ಜವಾಬ್ದಾರಿ ಬಿಎಂಟಿಸಿ ವಹಿಸಲಿದೆ. ಉಳಿದಂತೆ ಕಂಪನಿಯೇ ಚಾಲಕರನ್ನು ನೀಡಬೇಕು ಮತ್ತು ಬಸ್ ನಿರ್ವಹಣೆ ಮಾಡಬೇಕಾಗಿದೆ. ನಿಗಮ ಕೇವಲ ನಿರ್ವಾಹಕ, ಟಿಕೆಟ್ ವಿತರಿಸುವ ಯಂತ್ರ (ಇಟಿಎಂ) ಮತ್ತು ವಿದ್ಯುತ್ ದರ ನೀಡಲಿದೆ. ಇಷ್ಟೆಲ್ಲ ಷರತ್ತಿನ ಬಳಿಕವೂ ಗೋಲ್ಡ್‌ಸ್ಟೋನ್ ಕಂಪನಿ ಫೈನಾನ್ಸಿಯಲ್ ಬಿಡ್‌ನಲ್ಲಿ ಪ್ರತಿ ಕಿ.ಮೀ.ಗೆ 37.5 ರೂ. ಬಿಡ್ ಮಾಡಿದೆ. ವಿದ್ಯುತ್ ಮತ್ತು ನಿರ್ವಾಹಕನ ವೆಚ್ಚ ಸೇರಿ ಬಿಎಂಟಿಸಿಗೆ ಪ್ರತಿ ಕಿ.ಮೀ.ಗೆ 55-58 ರೂ. ವೆಚ್ಚವಾಗಲಿದೆ. ಪ್ರತಿ ನಿತ್ಯ ಒಂದು ಬಸ್ ಕನಿಷ್ಠ 200 ಕಿ.ಮೀ. ಓಡಾಟದ ಭರವಸೆಯನ್ನು ನಿಗಮ ನೀಡಿದೆ.



» ನಾಲ್ಕು ತಾಸಿನಲ್ಲಿ ಪೂರ್ಣ ಚಾರ್ಜ್

» ನಿಲುಗಡೆಗೆ ನಿಗಮದಿಂದ ಡಿಪೋದಲ್ಲಿ ಜಾಗ

### 12 ಮೀ. ಬಸ್ ಆಯ್ಕೆ

9 ಮೀಟರ್ ಉದ್ದದ 32 ಸೀಟು ಸಾಮರ್ಥ್ಯದ ಬಸ್ ಅಥವಾ 12 ಮೀಟರ್ ಉದ್ದದ 41 ಸೀಟು ಸಾಮರ್ಥ್ಯದ ಬಸ್‌ಗಳನ್ನು 10 ವರ್ಷಗಳ ಕಾಲ ಗುತ್ತಿಗೆ ಆಧಾರದಲ್ಲಿ ಪಡೆಯಲು ನಿಗಮ ಟೆಂಡರ್ ಆಹ್ವಾನಿಸಿತ್ತು. ಗೋಲ್ಡ್‌ಸ್ಟೋನ್ 2 ಮಾದರಿಯ ಬಸ್‌ಗಳಿಗೆ ಕನಿಷ್ಠ ಬಿಡ್ ಸಲ್ಲಿಸಿತ್ತು. 9 ಮೀ. ಉದ್ದದ ಹವಾನಿಯಂತ್ರಿತ ಬಸ್‌ಗೆ ಪ್ರತಿ ಕಿ.ಮೀ.ಗೆ 24 ರೂ. ಮತ್ತು 12 ಮೀ. ಹವಾನಿಯಂತ್ರಿತ ಬಸ್‌ಗೆ ಪ್ರತಿ ಕಿ.ಮೀ.ಗೆ 37.5 ರೂ. ಸಲ್ಲಿಸಿತ್ತು. ಬಿಎಂಟಿಸಿ 12 ಮೀ.ನ ಬಸ್ ಪಡೆಯಲು ನಿರ್ಧರಿಸಿದ್ದು, ಗೋಲ್ಡ್‌ಸ್ಟೋನ್ ಸಲ್ಲಿಸಿದ ಫೈನಾನ್ಸಿಯಲ್ ಬಿಡ್ ದೇಶದಲ್ಲೇ ಅತಿ ಕಡಿಮೆ ಬಿಡ್ ಆಗಿದೆ ಎಂದು ನಿಗಮದ ವ್ಯವಸ್ಥಾಪಕ ನಿರ್ದೇಶಕ ವಿ.ಪೊನ್ನುರಾಜ್ 'ವಿಜಯವಾಣಿ'ಗೆ ತಿಳಿಸಿದ್ದಾರೆ.

### 1 ಕೋಟಿ ರೂ. ಅನುದಾನ

ಕೇಂದ್ರ ಸರ್ಕಾರ 'ಫೇಮ್' ಯೋಜನೆಯಡಿ 150 ಎಲೆಕ್ಟ್ರಿಕ್ ಬಸ್ ಖರೀದಿಗೆ ಒಪ್ಪಿಗೆ ಸೂಚಿಸಿದೆ. ಮೊದಲ ಹಂತದಲ್ಲಿ ಕೇವಲ 40 ಬಸ್‌ಗಳಿಗೆ ಅನುದಾನ ನೀಡಲಿದೆ. ಕೇಂದ್ರದಿಂದ ಪ್ರತಿ ಬಸ್‌ಗೆ 1 ಕೋಟಿ ರೂ. ಅನುದಾನ ಸಿಗಲಿದೆ. ಎಲೆಕ್ಟ್ರಿಕ್ ಬಸ್ ಖರೀದಿಸಿದರೆ ಪ್ರತಿ ಬಸ್‌ಗೆ 2-3 ಕೋಟಿ ರೂ. ವೆಚ್ಚವಾಗುವ ಹಿನ್ನೆಲೆಯಲ್ಲಿ ಗುತ್ತಿಗೆ ಆಧಾರದಲ್ಲಿ ಬಸ್ ಪಡೆಯಲು ಬಿಎಂಟಿಸಿ ನಿರ್ಧರಿಸಿದೆ. ಕೇಂದ್ರ ನೀಡುವ 40 ಕೋಟಿ ರೂ.ನಲ್ಲೇ ಗುತ್ತಿಗೆ ಪಡೆದ ಕಂಪನಿಗಳಿಗೆ ನಿಗಮ ಬಾಡಿಗೆ ನೀಡಲಿದೆ. ಸಬ್ಸಿಡಿ ದರದಲ್ಲಿ ವಿದ್ಯುತ್ ಪೂರೈಸಲು ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ನಿಗಮ ನಿರ್ಧರಿಸಿದೆ.



ಟೆಂಡರ್ ಷರತ್ತಿನಂತೆ ಕಂಪನಿ ಫೆ.27ರಿಂದ 6 ತಿಂಗಳೊಳಗಾಗಿ ಬಸ್‌ಗಳನ್ನು ನಿಗಮಕ್ಕೆ ನೀಡಬೇಕು. ಮೊದಲ ಹಂತದಲ್ಲಿ 40 ಬಸ್ ಬರಲಿದ್ದು, ಅತಿ ಕಡಿಮೆ ದರದಲ್ಲಿ ಬಿಎಂಟಿಸಿಗೆ ಎಲೆಕ್ಟ್ರಿಕ್ ಬಸ್ ಸಿಗುತ್ತಿದೆ.

। ವಿ.ಪೊನ್ನುರಾಜ್ ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ

ಮಾತನಾಡಿದರು.

Pg-04, 09-03-18

# ನೈರುತ್ಯ ರೈಲ್ವೆಯ ಎಲ್ಲ ಮಾರ್ಗ ವಿದ್ಯುದೀಕರಣ

ಸಂ.ಕ.ಸಮಾಚಾರ ಬೆಂಗಳೂರು

ಮಾಲಿನ್ಯ ತಡೆಗಟ್ಟುವ ಹಾಗೂ ಇಂಧನ ಉಳಿಕೆಯ ದೃಷ್ಟಿಯಿಂದ ಮುಂದಿನ ಐದು ವರ್ಷಗಳಲ್ಲಿ ನೈರುತ್ಯ ರೈಲ್ವೆಯ ಎಲ್ಲ ಮಾರ್ಗಗಳನ್ನು ವಿದ್ಯುದೀಕರಣ ಮಾಡಲಾಗುವುದು ಎಂದು ಕೇಂದ್ರ ರೈಲ್ವೆ ಸಚಿವ ಪಿಯೂಷ್ ಗೋಯಲ್ ಭರವಸೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾಲಿನ್ಯದ ದೃಷ್ಟಿಯಿಂದ ಹಾಗೂ ಇಂಧನ ಉಳಿಸಲು ರೈಲು ಮಾರ್ಗಗಳ ವಿದ್ಯುದೀಕರಣ ಅಗತ್ಯವಾಗಿದ್ದು ಮೂರೂವರೆ ವರ್ಷಗಳಲ್ಲಿ 8 ರಿಂದ 77 ಕಿ.ಮೀ ಮಾರ್ಗ ವಿದ್ಯುದೀಕರಣಗೊಳಿಸಲಾಗಿದೆ. ಮುಂದಿನ ಐದು ವರ್ಷಗಳಲ್ಲಿ ನೈರುತ್ಯ ರೈಲ್ವೆಯ ಎಲ್ಲ ಮಾರ್ಗಗಳನ್ನು ವಿದ್ಯುದೀಕರಣಗೊಳ್ಳಲಿವೆ ಎಂದರು.

2004ರಿಂದ 2014ರವರೆಗಿನ ಅವಧಿಯಲ್ಲಿನ ಹತ್ತು ವರ್ಷದ ಅಭಿವೃದ್ಧಿಯನ್ನು ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರದ 4 ವರ್ಷಗಳಲ್ಲಿ ಮಾಡಲಾಗಿದೆ. ಶೇ.200ರಷ್ಟು ಹೊಸ ಮಾರ್ಗ ಅಳವಡಿಸಲಾಗಿದೆ. ಈ ಮೂಲಕ ಎರಡೂವರೆ ಪಟ್ಟು ಹೊಸ ಮಾರ್ಗ ಘೋಷಿಸಿದಂತಾಗಿದೆ ಎಂದ ಅವರು, ಸುಮಾರು ಮೂರು ಪಟ್ಟು ಹಳಿಗಳ ಅಭಿವೃದ್ಧಿ ಮಾಡಲಾಗಿದ್ದು ಡಬ್ಲಿಂಗ್ ಕೆಲಸಕ್ಕೆ ವೇಗ ನೀಡಲಾಗುತ್ತಿದೆ. ಕಳೆದ ಹತ್ತು ವರ್ಷಗಳಿಗೆ ಹೋಲಿಸಿದರೆ ಶೇ.16ರಷ್ಟು ಡಬ್ಲಿಂಗ್ ಕೆಲಸ ಮಾಡಲಾಗಿದೆ. ಐದು ವರ್ಷಗಳಲ್ಲಿ 92 ಹೊಸ ರೈಲುಗಳ ಲೋಕಾರ್ಪಣೆಗೊಂಡಿವೆ ಎಂದರು.

ಅಭಿವೃದ್ಧಿ ವಿಚಾರದಲ್ಲಿ ರಾಜಕೀಯ ಮಾಡುತ್ತಿಲ್ಲ. ಕರ್ನಾಟಕಕ್ಕೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಎಲ್ಲ ರಾಜ್ಯಗಳಲ್ಲೂ ಬದ್ಧತೆಯಿಂದ ಕೆಲಸ ಮಾಡಲಾಗುತ್ತಿದೆ. ಮೋದಿ ಸರ್ಕಾರದ ಅವಧಿಯಲ್ಲಿ ಎರಡುವರೆ ಪಟ್ಟು ಬಂಡವಾಳ ವೆಚ್ಚ ಹೆಚ್ಚಿದೆ ಎಂದು ಮಾಹಿತಿ ನೀಡಿದರು.

ಕೇಂದ್ರ ಸಚಿವರ ಆದೇಶದ ಮೇರೆಗೆ 8 ಹೊಸ ಸೇವೆ ಪ್ರಾರಂಭಿಸಲು ನಿರ್ಧರಿಸಲಾಗಿದೆ. ಬೈಯಪ್ಪನಹಳ್ಳಿಯಿಂದ ಬೆಂಗಳೂರು, ಪೂರ್ವದಲ್ಲಿ ಹೊಸೂರು-ಬಾಣಸವಾಡಿ ಕಡೆಗೆ ವಿಸ್ತರಿಸಲು ಚಿಂತನೆ ನಡೆದಿದೆ. ಚೆನ್ನೈ ಕಡೆ ವೈಟ್‌ಫೀಲ್ಡ್‌ನಿಂದ ಬೈಯಪ್ಪನಹಳ್ಳಿ, ಹಾಸನದ ಕಡೆಗೆ ನೆಲಮಂಗಲದಿಂದ ಯಶವಂತಪುರ, ಉತ್ತರದ ಕಡೆ ರಾಜನಕುಂಟೆಯಿಂದ ಯಲಹಂಕ, ಈಶಾನ್ಯದ ಕಡೆ ದೇವನಹಳ್ಳಿಯಿಂದ ಯಲಹಂಕ ಕಡೆ ಸಬ್ ಅಬ್ ಅರ್ಬನ್ ಯೋಜನೆ ನಡೆಯುತ್ತಿದೆ. 110 ಸಬ್ ಅರ್ಬನ್ ಕಾರ್ಯ ಪ್ರಗತಿಯಲ್ಲಿವೆ.

—ಎ.ಕೆ.ಗುಪ್ತಾ, ನೈರುತ್ಯ ರೈಲ್ವೆಯ ಪ್ರಧಾನ ವ್ಯವಸ್ಥಾಪಕ

## ಜಿಎಸ್‌ಟಿ ವ್ಯಾಪ್ತಿಗೆ ವಿದ್ಯುತ್: ಸಲಹೆ

ನವದೆಹಲಿ (ಪಿಟಿಐ): ವಿದ್ಯುತ್ ಪೂರೈಕೆಯನ್ನು ಸರಕು ಮತ್ತು ಸೇವಾ ತೆರಿಗೆ ವ್ಯಾಪ್ತಿಗೆ ತರಬಹುದಾಗಿದೆ ಎಂದು ವಿದ್ಯುತ್ ಮತ್ತು ವಿದ್ಯುನ್ಮಾನ ಉಪಕರಣಗಳ ತಯಾರಕರ ಒಕ್ಕೂಟ (ಐಇಇಎಂಎ) ಅಭಿಪ್ರಾಯಪಟ್ಟಿದೆ.

'ವಿದ್ಯುತ್ ಪೂರೈಕೆಯನ್ನು ಜಿಎಸ್‌ಟಿ ವ್ಯಾಪ್ತಿಗೆ ತಂದರೆ, ಅಗ್ಗದ ದರದಲ್ಲಿ ವಿದ್ಯುತ್ ಪೂರೈಸಬಹುದು. ಈ ಬಗ್ಗೆ ಒಕ್ಕೂಟವು ವರದಿ ತಯಾರಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದೆ' ಎಂದು ಒಕ್ಕೂಟದ ಮಹಾ ನಿರ್ದೇಶಕ ಸುನಿಲ್ ಮಿಶ್ರಾ ಹೇಳಿದ್ದಾರೆ.

ಪ್ರಜಾವಾಣಿ

DH
DECCAN HERALD



# I WILL TAKE PART IN 'JANASPANDANA' AND MADE A DIFFERENCE.

## ON 17TH MARCH, YOU CAN TOO.

**MILIND**
Padmanabhanagara, Participant of Janaspandana 2017

Participate in **Janaspandana, an interactive platform brought to you by Deccan Herald and Prajavani,** where you as a responsible citizen or as a representative of an RWA can join hands with authorities to address the civic issues of your ward.

Voice your grievances and pose your questions on Drinking water shortage, Garbage disposal, Cleanliness, Road safety, Parking problem, Traffic, Chain snatching, Parks, Lakes and more to your MLA, Corporators, Officials from various departments like the BBMP, BESCOM, BWSSB and the Police, amongst others.

If you are a resident of Malleshwaram constituency, email your grievances to **janaspandana@printersmysore.co.in,** we will raise the most relevant issues at the event.

# JANASPANDANA

CITIZENS FOR CHANGE

## Meet us on Saturday, 17th March 2018

**Venue:**
**Shri Krishnadevaraya Kalamandira, 16th Cross, Malleshwaram, Behind Chowdaiah Memorial Hall, Bengaluru - 560 003.**

Ward Numbers: **35**-Aramane Nagara | **36**-Mattikere | **45**-Malleshwaram | **64**-Rajmahal Guttahalli | **65**-Kadu Malleshwaram | **66**-Subramanyanagara | **76**-Gayathrinagara

**Time: 10:00 am - 1:00 pm (Registration starts from 9:00 am)**
For more information, please contact: **Ravi M: 9606912148** (9 am to 6 pm)

**www.deccanherald.com** **#DHJanaspandana**